

ಕೌತುಕವೆಂದರೆ ಅದು ಹೇಗೋ ಕರಿ ಕೆಂಬರಲು ಹಾವನ್ನು ಹಿಡಿದ ವಿಚಾರ ದೂರದಲ್ಲಿ ಕಾದು ಕೂತ ಗರುಡನಿಗೆ ಗೊತ್ತಾಗಿ ಬಿಡುತ್ತದೆ. ಆಗಸದಲ್ಲಿ ಸೊಯ್ಯೆಂದು ಎರಗಿ ಬರುವ ಬ್ರಾಮಿಣಿ ಕೈಟ್ ಮಿಂಚಿನಂತೆ ದಾಳಿ ಮಾಡುತ್ತದೆ. ಕರಿ ಕೆಂಬರಲು ಹಕ್ಕಿಯ ಚಲನವಲನ ಗಮನಿಸುತ್ತಾ ಕಾಲಕಳೆಯುವ ಗರುಡ ಕಸಿದು ತಿನ್ನುವ ಕೆಲಸದಲ್ಲಿ ನಿಸ್ಸೀಮ. ಗರುಡ ಬರುವುದರೊಳಗೆ ಹಾವನ್ನು ಹಕ್ಕಿ ನುಂಗಿದರೆ ಬಚಾವು ಇಲ್ಲವೇ ಅದು ಖಂಡಿತಾ ಗರುಡಪ್ಪನ ಪಾಲಿಗೆ ಸೇರುತ್ತದೆ. ನಾನು ನೋಡಿದ ಐದಾರು ಘಟನೆಗಳಲ್ಲಿ ಬಕ ತನ್ನ ಆಹಾರ ಕಳಕೊಂಡ ಸಂದರ್ಭಗಳೇ ಹೆಚ್ಚು. ಇದನ್ನೇ ಹಿರಿಯರು ಗಾದೆ ಮಾಡಿ 'ಹಾವು ಹೊಡೆದು ಹದ್ದಿಗೆ ಹಾಕು' ಎಂದಿರಬೇಕು.

ಒಮ್ಮೊಮ್ಮೆ ಬಕದ ಅಕ್ಕಪಕ್ಕ ಊಟ ಹೆರಕುವ ಅದರದೇ ಜಾತಿಯ ಐಬೀಸ್‌ಗಳು ಕೂಡ ಹಾವನ್ನು ಕಸಿಯಲು ಪ್ರಯತ್ನಿಸುತ್ತವೆ. ಆಗ ಜೋರಾದ ಗಲಾಟೆ ನಡೆದು ಮಾರಾಮಾರಿಯೂ ಆಗುವುದುಂಟು. ಎಷ್ಟೋ ಸಲ ಎರಡು ಕರಿ ಕೆಂಬರಲುಗಳ ಜಗಳ ನಡೆಯುವಾಗ ನಡುವೆ ನುಸುಳಿ ಬರುವ ಕಳ್ಳ ಬಕಗಳು ಸತ್ತ ಹಾವನ್ನು ಕದ್ದುಕೊಂಡು ಓಡಿ ಹೋಗುತ್ತವೆ. ಈ ಗಲಾಟೆಯಲ್ಲಿ ಸಿಕ್ಕವರಿಗೇ ಸೀರುಂಡೆ.

ಜಗಳವೇ ಮುಖ್ಯವೆಂದು ಭಾವಿಸುವ ಕರಿ ಕೆಂಬರಲು ಮೈಮರೆತು ತಾನೇ ಕಷ್ಟಬಿದ್ದು ಸಂಗ್ರಹಿಸಿ ಆಹಾರವನ್ನು ಪದೇಪದೇ ಕಳೆದುಕೊಳ್ಳುತ್ತದೆ. ಆದರೆ, ಈ ಬಗ್ಗೆ ಕರಿ ಕೆಂಬರಲು ಹಕ್ಕಿಗೆ ಕೊಂಚವೂ ಪಶ್ಚಾತ್ತಾಪವಿಲ್ಲ. ಮತ್ತೆ ಎಲ್ಲಾ ಮರೆತು ಮತ್ತೆ ತುತ್ತು ಹೆರಕುವ ಕೆಲಸ ಚಾಲು ಮಾಡುತ್ತದೆ. ಹದ್ದುಗಳು ಶಕ್ತಿಶಾಲಿಗಳೇ ಅವಕ್ಕೆ ಕೆಸರಿನೊಳಗಿನ ಹಾವನ್ನು ಹೆಕ್ಕಿ ತೆಗೆಯುವ ಸಾಮರ್ಥ್ಯವಿಲ್ಲ. ಹೀಗಾಗಿ, ಬ್ಲಾಕ್ ಹೆಡೆಡ್ ಐಬೀಸ್ ಹಕ್ಕಿಯ ಹಿಂದೆ ವಂಚಿಸಿ ಆಹಾರ ಸಂಪಾದಿಸುವ ಅನೇಕ ಹಕ್ಕಿಗಳು ನಮ್ಮಂತೆಯೇ ಹೊಂಚುಹಾಕಿ ಕೂತಿರುತ್ತವೆ. ●